**<u>ದಿಃ31.10.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಕೆ.ಎಸ್.ಆರ್ ವಕೀಲರಿಂದ ಃ</u>**

ನಾನು ಈ ಅರ್ಜಿಯಲ್ಲಿ ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಹಾಜರು ಮಾಡಿದ್ದು, ಅದರಲ್ಲಿ ಪ್ರಸ್ತಾಪಿಸಿರುವ ವಿಚಾರಗಳನ್ನು ನಾನೇ ಮಾಹಿತಿ ಕೊಟ್ಟು ಬರೆಸಿರುತ್ತೇನೆ ಮತ್ತು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಒಕ್ಕಣೆಯನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಸಂಗತಿಗಳು ಸತ್ಯದಿಂದ ಕೂಡಿದೆ ಎಂದು ಮತ್ತು ಅದರಲ್ಲಿ ಇರುವ ಸಹಿ ನನ್ನದಾಗಿರುತ್ತದೆ.

ನನ್ನ ಮುಖ್ಯ ವಿಚಾರಣೆಯ ಪೂರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರು ಮಾಡಿದ್ದು ಅದನ್ನು ನೋಡಿ ಗುರುತಿಸಿರುತ್ತೇನೆ.

1. ಪ್ರಥಮ ವರ್ತಮಾನ ವರದಿಯ ಯಥಾ ನಕಲು ನಿಪಿ.1
2. ದೂರಿನ ಯಥಾ ನಕಲು ನಿಪಿ.2
3. ವರದಿಯ ಯಥಾ ನಕಲು ನಿಪಿ.3
4. ಕಚ್ಚಾ ನಾಕಾಶೆ ಸಹಿತ ಅಪರಾಧ ವಿವಿವರ ನಮೂನೆಯ ಯಥಾ ನಕಲು ನಿಪಿ.4
5. ವಾಹನ ತಪಾಸಣೆ ವರದಿಯ ಯಥಾ ನಕಲು ನಿಪಿ.5
6. ಮರಣೋತ್ತರ ಪರೀಕ್ಷೆಯ ಯಥಾ ನಕಲು ನಿಪಿ.6

7. ಅವಪಂಚನಾಮೆಯ ಯಥಾ ನಕಲು ನಿಪಿ.7

8. ಅಂತಿಮ ದೋಷಾರೋಪಣಾ ಯಥಾ ನಕಲು ನಿಪಿ.8

9. ವಂಶವೃಕ್ಷದ ದೃಢೀರಣ ಪತ್ರ ನಿಪಿ.9

10. ವರ್ಗಾವಣೆ ಪ್ರಮಾಣ ಪತ್ರ ನಿಪಿ.10

11. ಆಧಾರ್ ಕಾರ್ಡ್ ನಿಪಿ.11

12. 1 ಔಷದಿ ಬಿಲ್ಲು ನಿಪಿ.12

13. ಎರಡು ಆಸ್ಪತ್ರೆಯ ಬಿಲ್ಲು ನಿಪಿ.13 ಮತ್ತು 14 ಎಂದು ಗುರುತಿಸಿದ್ದೇನೆ.

ಆದ್ದರಿಂದ ನಾನು ಅರ್ಜಿಯಲ್ಲಿ ಕೋರಿದಂತೆ ಆದೇಶ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ.ಎಂ.ಎಸ್.ಪಿ ವಕೀಲರಿಂದ ಃ**

ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

(ಸಿ. ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.